| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 555/2024**

ಪಿಡ್ಲ್ಯೂಃ 7 ಸಿಡ್ಲ್ಯೂಃ 6

ಸಾಕ್ಷಿದಾರಳ ಹೆಸರು : ವನಜಾ
ಗಂಡನ ಹೆಸರು : ಸಾಧು ಶೆಟ್ಟಿ
ಪ್ರಾಯ : 70 ವರ್ಷ
ಉದ್ಯೋಗ : ಗೃಹಿಣಿ
ವಾಸ : ಬಜಗೋಳಿ

ದಿನಾಂಕ 08.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಈ ಹಿಂದೆ ನೋಡಿರುತ್ತೇನೆ.

ಚಾಸಾ-1 ರಿಂದ 4 ರವರ ಪರಿಚಯ ಇರುವುದಿಲ್ಲ. ಚಾಸಾ-7 ರವರು ಬಸ್ಸಿನಲ್ಲಿ ಒಟ್ಟಿಗೆ ಪ್ರಯಾಣಿಸುತ್ತಿದ್ದವರು. ಚಾಸಾ-5 ರವರ ಪರಿಚಯ ಇದೆ. ಅವರು ನನ್ನ ಸಂಬಂಧಿಕರು.

ದಿಃ10.12.2023 ರಂದು ನಾನು ಮತ್ತು ಚಾಸಾ-5 ಮುಂಬೈಗೆ ಹೋಗಲು ಕಾರ್ಕಳ ಬೈಪಾಸ್ ನಿಂದ ಅಂದಾಜು 3.00 ಗಂಟೆಗೆ ರೇಷ್ಮಾ ಎಂಬ ಬಸ್ಸಿನಲ್ಲಿ ಹತ್ತಿ ಪ್ರಯಾಣಿಸುತ್ತಿದ್ದೇವು. ನಂತರ ಮಂಜರ್ ಪಲ್ಕೆ ಹತ್ತಿರ ಮಧ್ಯಾಹ್ನ 3.30 ಗಂಟೆಗೆ ಒಂದು ಜೀಪು ಬಂದು ನಮ್ಮ ಬಸ್ಸಿ ಗೆ ಢಿಕ್ಕಿಹೊಡೆದಿರುತ್ತದೆ. ಅಪಘಾತವಾದ ಪರಿಣಾಮ ನನ್ನ

ಎಡಕಾಲಿನ ಮೂಳೆ ಮುರಿತ ಆಗಿರುತ್ತದೆ. ಚಾಸಾ-5 ರವರಿಗೆ ಮೂಳೆ ಮುರಿದಿರುತ್ತದೆ. ನಮ್ಮನ್ನು ಕಾರ್ಕಳದ ಟಿ ಎಂ ಎ ಪೈ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿರುತ್ತಾರೆ. ಸದ್ರಿ ಜೀಪಿನಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಜೀಪಿನಲ್ಲಿದ್ದ ಸಣ್ಣ ಮಗುವಿಗೆ ಮತ್ತು ಶಿವಪ್ಪ ಎಂಬುವವರಿಗೆ ಪೆಟ್ಟಾಗಿರುತ್ತದೆ. ನಂತರ ನನಗೆ ಆಸ್ಪತ್ರೆಯಲ್ಲಿ ಸದ್ರಿ ಶಿವಪ್ಪ ಮೃತಪಟ್ಟಿರುವ ಬಗ್ಗೆ ತಿಳಿದುಬಂದಿರುತ್ತದೆ.

ಈ ಅಪಘಾತಕ್ಕೆ ಜೀಪು ಬಂದು ಢಿಕ್ಕಿಹೊಡೆದ್ದದ್ದು ಕಾರಣ ಎಂದು ಹೇಳುತ್ತಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ನಿಪಿ-5 ಪೋಟೋದಲ್ಲಿ ಢಿಕ್ಕಿ ಪಡಿಸಿದ ಜೀಪು ಗುರುತಿಸಿರುತ್ತೇನೆ. ಈಗ ನಾನು ನೋಡಿದ ನಿಪಿ-9 ಪೋಟೋದಲ್ಲಿ ನಾವು ಪ್ರಯಾಣಿಸುತ್ತಿದ್ದ ರೇಷ್ಮಾ ಬಸ್ಸು ಎಂದು ಗುರುತಿಸಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ಅಪಘಾತಕ್ಕೆ ಕೆಎ-20-ಎಂ-7692 ಜೀಪು ಚಾಲಕ ಆರೋಪಿಯು ಜೀಪನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ರಸ್ತೆಯ ತೀರಾ ಬಲ ಬದಿಗೆಗೆ ಚಲಾಯಿಸಿ ಅಪಘಾತವಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಸ್ ಕೆ ವಕೀಲರಿಂದಃ

ನಾವು ಪ್ರಯಾಣಿಸುತ್ತಿದ್ದ ಬಸುಸ ಸ್ಲೀಪರ್ ಬಸ್ಸು ಆಗಿರುತ್ತದೆ. ಬಸ್ಸು ಹೊರಟ ಸುಮಾರು 15 ನಿಮಿಷಗಳ ನಂತರ ಅಪಘಾತವಾಗಿರುತ್ತದೆ. ನಾನು ಮತ್ತು ಚಾಸಾ-5 ರವರು ಬಸ್ಸಿನಲ್ಲಿ ಮಾತಾನಡುತ್ತಾ ಕುಳಿತ್ತಿದ್ದೇವು. ನಾವು ಕುಳಿತ್ತಿದ್ದ ಸೀಟಿನಿಂದ ಎದುರು

ಬಂದಾಗಿರುತ್ತದೆ. ಅದೇ ರೀತಿ ಚಾಲಕ ಹಿಂದಿನ ಭಾಗ ಮುಚ್ಚಿರುತ್ತದೆ. ಹಾಗಾಗಿ ನಮಗೆ ಬಸ್ಸಿನ ಎದುರಿನಲ್ಲಿ ರಸ್ತೆ ಕಾಣುತ್ತಿರಲಿಲ್ಲ.

ನಮಗೆ ಅಪಘಾತವಾದ ನಂತರ ಅಪಘಾತವಾಗಿದೆ ಎಂದು ತಿಳಿದುಬಂತು. ನನಗೆ ಬಸ್ಸಿನ ಒಳಗೆ ಕಾಲಿಗೆ ಪೆಟ್ಟಾಗಿರುತ್ತದೆ. ಆ ಕಾರಣ ನಾನು ಬೇರೆ ಯಾವ ಕಡೆಗೆ ಗಮನ ಕೊಟ್ಟಿರುವುದಿಲ್ಲ. ಅದೇ ರೀತಿ ನನಗೆ ಬಸ್ಸು ಮತ್ತು ಜೀಪಿನ ನಂಬರುಗಳು ಗೊತ್ತಿರುವುದಿಲ್ಲ . ಪೊಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾರಿಗೆ ಪೆಟ್ಟಾಗಿರುತ್ತದೆ ಮತ್ತು ಯಾರು ಅಪಘಾತದಿಂದ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಹೇಗೆ ಅಪಘಾತವಾಗಿದೆ ಎಂದು ಪೊಲೀಸರಿಗೆ ಯಾವುದೇ ರೀತಿಯ ಮಾಹಿತಿ ನೀಡಿರುವುದಿಲ್ಲ. ನಾನು ಆರೋಪಿಯನ್ನು ಪ್ರಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ನೋಡಿರುತ್ತೇನೆ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ